ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 201 ಎಂಎಂಕೆ 2023

ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಮಹಡಿ, ವಿಕಾಸ ಸೌಧ,
ಬೆಂಗಳೂರು, ದಿನಾಂಕ:05.02.2024

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ

ಇವರಿಗೆ:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ, ಬೆಂಗಳೂರು.
6. ನಿರ್ದೇಶಕರು, ಕೆ.ಇ.ಆರ್.ಎಸ್., ಕೆ.ಆರ್.ಸಾಗರ.
7. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು.
8. ನಿರ್ದೇಶಕರು, ವಾಲ್ಮಿ, ಧಾರವಾಡ.
9. ನಿಬಂಧಕರು/ಮುಖ್ಯ ಇಂಜಿನಿಯರ್, ಎಸಿಐಡಬ್ಲ್ಯೂಆರ್ಎಂ, ತಿಮ್ಮಯ್ಯ ರಸ್ತೆ, ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ ಕೆ. ಟಿ. ರವಿ, ಕೆ.ಟಿ.ಆರ್. ಕನ್ಸ್‌ಟ್ರಕ್ಷನ್ಸ್ ಇವರನ್ನು ರಾಜ್ಯದೊಳಗಿನ ಯಾವುದೇ ಸಂಗ್ರಹಣಾ ಚಟುವಟಿಕೆಯಲ್ಲಿ ಭಾಗವಹಿಸದಂತೆ ಡಿಬಾರ್ ಮಾಡಿರುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಲೋಇ 219 ಬಿಎಂಎಸ್ 2023 ದಿನಾಂಕ:11.01.2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಲೋಕೋಪಯೋಗಿ ಇಲಾಖೆಯಿಂದ ಹೊರಡಿಸಲಾಗಿರುವ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ (ಪ್ರತಿ ಲಗತ್ತಿಸಿದೆ) ಗುತ್ತಿಗೆದಾರರಾದ ಶ್ರೀ ಕೆ. ಟಿ. ರವಿ, ಕೆಟಿಆರ್ ಕನ್ಸ್ಟ್ರಕ್ಷನ್ಸ್ ಇವರನ್ನು ಕೆ.ಟಿ.ಪಿ.ಪಿ. ಕಾಯ್ದೆಯ 14A (2)ರಡಿಯಲ್ಲಿ 03 ವರ್ಷಗಳ ಅವಧಿಗೆ ರಾಜ್ಯದೊಳಗಿನ ಯಾವುದೇ ಸಂಗ್ರಹಣಾ ಚಟುವಟಿಕೆಯಲ್ಲಿ ಭಾಗವಹಿಸದಂತೆ ಡಿಬಾರ್ (Debar) ಮಾಡಿ ಆದೇಶಿಸಲಾಗಿದೆ, ಹಾಗೂ ಸಂಬಂಧಪಟ್ಟ ಪ್ರಾಧಿಕಾರಗಳು ಕೆಟಿಪಿಪಿ ನಿಯಮಗಳು 2000ರ ನಿಯಮ 26(ಬಿ) ಹಾಗೂ 26(ಸಿ)ರನ್ವಯ ಮುಂದಿನ ಕ್ರಮವಹಿಸತಕ್ಕದ್ದು ಎಂದು ಆದೇಶಿಸಲಾಗಿದೆ.

ಆದುದರಿಂದ, ಉಲ್ಲೇಖಿತ ಸರ್ಕಾರಿ ಆದೇಶ ಹಾಗೂ ಕೆ.ಟಿ.ಪಿ.ಪಿ. ನಿಯಮಗಳನ್ವಯ ತಮ್ಮ ವ್ಯಾಪ್ತಿಯ ಸಂಗ್ರಹಣಾ ಚಟುವಟಿಕೆಗಳ ಕುರಿತಂತೆ ಅಗತ್ಯ ಕ್ರಮವಹಿಸುವಂತೆ ತಮ್ಮ ಅಧೀನದ ಎಲ್ಲಾ ಟೆಂಡರ್ ಅನುಮೋದನೆ ಹಾಗೂ ಟೆಂಡರ್ ಆಹ್ವಾನ ಮಾಡುವ ಪ್ರಾಧಿಕಾರಗಳಿಗೆ ನಿರ್ದೇಶನ ನೀಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
05/02/2024
(ಮನೋಹರ ವ್ಯ. ರೊಟ್ಟೆ)
ವಿಶೇಷ ಕರ್ತವ್ಯಾಧಿಕಾರಿ
ಜಲಸಂಪನ್ಮೂಲ ಇಲಾಖೆ

ಮುಖ್ಯ ಇಂಜಿನಿಯರ್‌ರವರ ಕಛೇರಿ
ಸಂಖ್ಯೆ: 2123
ದಿನಾಂಕ: 02-03-24

| | |
|---|---|
| ಮು.ಇಂ. | 26/2 |
| ಅ.ಇಂ. | |
| ನಿಬಂಧಕರು | |
| ಅಧೀಕ್ಷಕರು-1 | |
| ಅಧೀಕ್ಷಕರು-2 | 29/2 |
| ಅಧೀಕ್ಷಕರು-3 | |
| ಅಧೀಕ್ಷಕರು-4 | |

634
16/3/24

AG-1

ಪುಟ-2 ಕ್ಕೆ

Pg1
Jcomd



1) ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಬೆಂಗಳೂರು ಹಾಗೂ ಉಲ್ಲೇಖಿತ ಆದೇಶದಂತೆ ಕ್ರಮವಹಿಸಲು ಜಲಸಂಪನ್ಮೂಲ ಇಲಾಖೆಯ ಸಂಗ್ರಹಣಾ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಿರುವ ಕ್ರಮದ ಬಗ್ಗೆ ಮಾನ್ಯರ ಗಮನಕ್ಕೆ ತರಲು ಕೋರಿದೆ.

2) ಪ್ರತಿಯನ್ನು ನಿರ್ದೇಶಕರು, ಜಿಯೋಮ್ಯಾಟಿಕ್ಸ್ ಕೇಂದ್ರ, ಜಲಸಂಪನ್ಮೂಲ ಇಲಾಖೆ, ಆನಂದರಾವ ವೃತ್ತ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಆದೇಶದ ಪ್ರತಿಯನ್ನು ಜಲಸಂಪನ್ಮೂಲ ಇಲಾಖೆಯ ಜಾಲತಾಣದಲ್ಲಿ ಪ್ರಕಟಗೊಳಿಸಲು ಕೋರಿದೆ.

+++